ಬೆಳೆದ ಹಣ್ಣುಗಳೆಂಬ ವಿಶೇಷ ಮಮತೆಯಿಂದಷ್ಟೇ ಅವುಗಳನ್ನು ತಂದಿದ್ದ. ಮೇಲಾಗಿ ಅವುಗಳನ್ನು ಕೈಚೀಲದಲ್ಲಿ ಇಡುವಾಗ, ಅವೂ ಸಹ ಇನ್ನೂ ಮಾಗದ ಹಸಿರು ಕಾಯಿಗಳಾಗಿದ್ದವು. ಈಗ ಇಷ್ಟೆಲ್ಲಾ ಹುಡುಕಾಟದ ನಂತರವೂ ಮಾಗಿದ ಬಾಳೆಹಣ್ಣು ಸಿಗದಾದಾಗ, ತಾನು ತಂದಿದ್ದ ಬಾಳೆಹಣ್ಣು ನೆನಪಾಗಿ, ಚೀಲದಿಂದ ಬಾಳೆಹಣ್ಣುಗಳ ಪೊಟ್ಟಣ ತೆಗೆದ. ಆಶ್ಚರ್ಯ! ಅವುಗಳೆಲ್ಲಾ ಹಣ್ಣಾಗಿದ್ದವು. ಕೆಲವು ತುಸು ಮೆತ್ತಗಾಗಿದ್ದವು. ಅವುಗಳನ್ನು ಶ್ರೀಮಾತೆಯವರ ಬಳಿಗೆ ತಂದಾಗ, ಅವನ್ನು ನೋಡುತ್ತಲೇ ಶ್ರೀಮಾತೆಯವರು ಆನಂದದಿಂದ, "ಅರೆ, ನೋಡು, ತಾಯಿ (ದೇವಿ) ಅವಳ ಪೂಜೆಗೆ ಅವಳೇ ಹೇಗೆ ವ್ಯವಸ್ಥೆ ಮಾಡುತ್ತಾಳೆ! ನಾವು ವಿನಾ ಕಾರಣ ಕೊರಗುತ್ತಿದ್ದೆವು" ಎಂದರು. ಭಕ್ತ ಎಲ್ಲವನ್ನೂ ವಿವರಿಸಿದ ನಂತರ, ಅವರು ಆ ಹಣ್ಣುಗಳನ್ನು ಕೈಯಲ್ಲಿ ತೆಗೆದುಕೊಂಡು ಪರೀಕ್ಷಿಸಿ, ಅವು "ಕೋಟರ್" ಜಾತಿಯ ಬಾಳೆಹಣ್ಣುಗಳೆಂದು ಗುರುತಿಸಿ ಅವು ಪೂಜೆಗೆ ಅರ್ಹವಾದುವೆಂದು ತಿಳಿಸಿದರು. ಸನ್ನಿವೇಶಗಳು ಹೀಗೆ ತಿರುವು ಪಡೆದದ್ದರಿಂದ ಶ್ರೀಮಾತೆಯವರಿಗೆ ಬಹಳ ಸಮಾಧಾನವಾಯಿತು. ಭಕ್ತರ ಹೃದಯವೂ ಸಹ ಆನಂದದಿಂದ ತುಂಬಿತು.

ಹರ್ಷದುಂಬಿದ ಮನದಿಂದ ಮಂದಹಾಸ ವದನರಾಗಿ ಶ್ರೀಮಾತೆಯವರು ಭಕ್ತನನ್ನು ಕುರಿತು "ನಮ್ಮ ಪರಿಸ್ಥಿತಿ **'ಬೇಕಾದದ್ದು ಮನೆಯಲ್ಲಿಯೇ ಇದೆ; ಆದರೆ ಹುಡುಕಿದ್ದು ಎಲ್ಲೆಲ್ಲೋ!'** ಎಂಬಂತಿದೆ" ಎಂದರು. ಸ್ವಲ್ಪಕಾಲದ ನಂತರ ಅದೇ ಮಾತನ್ನು ಮತ್ತೆ ಮತ್ತೆ ನೆನಸಿಕೊಂಡು ನಗುತ್ತಾ ಉದ್ಗರಿಸುತ್ತಿದ್ದರು—"ಬೇಕಾದದ್ದು ಮನೆಯೊಳಗೇ ಇದೆ. ಆದರೆ ಹುಡುಕಿದ್ದು ಎಲ್ಲೆಲ್ಲೋ!" ಹೀಗೆ ಹೇಳಿದಾಗ ಅವರ ದೃಷ್ಟಿ ಆಳವಾಗಿ ದಿಗಂತದಲ್ಲಿ ನೆಟ್ಟಿತ್ತು. ಬಾಹ್ಯದ ಪರಿವೆಯೇ ಅವರಿಗೆ ಇರಲಿಲ್ಲ. ಭಕ್ತನೂ ಕೂಡ, ಅವರ ಮಾತನ್ನು ಕೇಳುತ್ತಾ ಮೂಕನಂತಾದ. ಶ್ರೀಮಾತೆಯವರ ಸೂಚನಾತ್ಮಕ ಉದ್ಗಾರದ ಅಂತರಾರ್ಥ ವೇನಿರಬಹುದೆಂದು ಭಾವಿಸುತ್ತಾ ಮಾತೆಯವರಿಗೆ ಪ್ರಣಾಮ ಮಾಡಿ ಹೊರಗೆ ಬಂದನು.

**ಸಂಗ್ರಹ : ಎನ್. ಗೋಪೀನಾಥ**

(ಆಧಾರ : *The Mother As I Saw Her* ಸ್ವಾಮಿ ಶಾರದೇಶಾನಂದ, ರಾಮಕೃಷ್ಣ ಮಠ, ಚೆನ್ನೈ)

# ಪ್ರಹಸನ ಪ್ರಸಂಗ

ಕೀರ್ತಿ ಪ್ರತಿಷ್ಠೆಗಳ ಆಸೆ ಅತಿರೇಕಕ್ಕೆ ಹೋದಾಗ ಕೆಲವರು ಇಲ್ಲಸಲ್ಲದ ಕೀರ್ತಿಯನ್ನೂ ತಮ್ಮ ಮೇಲೆ ಆರೋಪಿಸಿಕೊಂಡು ಅದರಲ್ಲೇ ಒಂದು ಆಂತರಿಕ ತೃಪ್ತಿಯನ್ನು ಪಡೆಯುತ್ತಾರೆ. ಕೆಲವೊಮ್ಮೆ ಅವರು ಇತರರ ಪ್ರತಿಷ್ಠೆಯ ಆಶ್ರಯದಲ್ಲಿ ತಮ್ಮ ಪ್ರತಿಷ್ಠೆಯನ್ನು ಮೆರೆಯಲು ಪ್ರಯತ್ನಿಸುತ್ತಾರೆ. ಇದು ಆಂತರಿಕ ಖಾಲಿತನವನ್ನು ಸೂಚಿಸುತ್ತದೆ.

ಇಬ್ಬರು ಸರ್ದಾರ್ಜಿ ಇರುತ್ತಾರೆ. ಅವರ ಹೆಸರು ಸಂತ ಸಿಂಗ್ ಮತ್ತು ಬಂಟ ಸಿಂಗ್. ಅವರು ತಮ್ಮ ತಮ್ಮ ಮಹತ್ ಸಾಧನೆಯ ಕುರಿತಾಗಿ ಚರ್ಚಿಸುತ್ತಿದ್ದರು. ಇಬ್ಬರೂ ತಮ್ಮ ತಂದೆಯೇ ಶ್ರೇಷ್ಠ ಎಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದರು.

ಸಂತಸಿಂಗ್: ನಿನಗೆ ಸುಯೆಸ್ ಕಾಲುವೆಯ ವಿಷಯ ಗೊತ್ತೇನು?

ಬಂಟಸಿಂಗ್: ಹೋ, ಕೇಳಿದ್ದೇನೆ.

ಸಂತಸಿಂಗ್: ಅದನ್ನು ತೋಡಿದವನೇ ನನ್ನ ಅಪ್ಪ! ಒಬ್ಬನೇ ಈ ಕೆಲಸವನ್ನು ಮಾಡಿದ್ದಾನೆ. ಇದಕ್ಕಿಂತ ದೊಡ್ಡ ಸಾಧನೆ ಇನ್ನೇನಿದೆ?

ಬಂಟಸಿಂಗ್: ಅದೇನು ದೊಡ್ಡದಲ್ಲ. ನನ್ನ ಅಪ್ಪ ಏನು ಮಾಡಿದನು ಎಂಬುದನ್ನು ಕೇಳಿದರೆ ನಿನಗೆ ತಲೆ ತಿರುಗಿಹೋಗುತ್ತದೆ.

ಸಂತಸಿಂಗ್: ಏನು ಮಾಡಿದ?

ಬಂಟಸಿಂಗ್: ನೀನು ಮೃತಸಾಗರದ (Dead Sea) ಬಗ್ಗೆ ಕೇಳಿರುವೆಯಾ?

ಸಂತಸಿಂಗ್: ಹೋ, ಬೇಕಾದಷ್ಟು ಕೇಳಿದ್ದೇನೆ.

ಬಂಟಸಿಂಗ್: ಅದನ್ನು ಕೊಂದವನು ನನ್ನ ಅಪ್ಪ!

* * *

ನಮ್ಮನ್ನು ಬಂಧಿಸುವ ಹಗ್ಗದ ದಾರವನ್ನು ನಾವೇ ನೂಲುತ್ತಿರುತ್ತೇವೆ—ನಮಗೇ ಅರಿವಿಲ್ಲದಂತೆ. ನಮ್ಮನ್ನು ಕೂಡಿಹಾಕುವ ಪಂಜರವನ್ನು ನಾವೇ ನಿರ್ಮಿಸುತ್ತೇವೆ. ಆದರೆ ನಮ್ಮ ಎಲ್ಲ ಕಷ್ಟಕ್ಕೂ ನಾವು ಹೊರಜಗತ್ತನ್ನು ದೂರುತ್ತೇವೆ.

ಒಂದು ಶಾಲೆಯಲ್ಲಿ ಮಕ್ಕಳೆಲ್ಲರನ್ನೂ ಸೇರಿಸಿ ಒಂದು ಫೋಟೋ ತೆಗೆಸುವ ಯೋಜನೆ ನಡೆದಿತ್ತು. ಉಪಾಧ್ಯಾಯರು ಫೋಟೋ ತೆಗೆಸುವುದರ ಪ್ರಯೋಜನವನ್ನು ಮಕ್ಕಳಿಗೆ ವಿವರಿಸಿ ಹೇಳುತ್ತಿದ್ದರು:

"ನೋಡಿ ಮಕ್ಕಳೇ, ನೀವು ಮುಂದೆ ದೊಡ್ಡವರಾದಮೇಲೆ ಬೇರೆಯವರಿಗೆ ನೀವು ಶಾಲೆಯಲ್ಲಿದ್ದಾಗ ಹೇಗಿದ್ದಿರಿ ಎಂದು ತೋರಿಸಬಹುದು. ಫೋಟೋದಲ್ಲಿರುವ ನಿಮ್ಮ ಸ್ನೇಹಿತರನ್ನು ತೋರಿಸಿ, 'ಇವನು ಇಂಥವನು, ಇವನು ಈಗ ಇಂಥ ಕೆಲಸ ಮಾಡುತ್ತಿದ್ದಾನೆ,' 'ಇವನು ಇಂಥವನು, ಇವನೀಗ ಅಮೆರಿಕದಲ್ಲಿದ್ದಾನೆ' ಹೀಗೆಲ್ಲ ವಿವರಿಸಿ ಹೇಳಬಹುದು."

ಇಷ್ಟರಲ್ಲಿ ಒಬ್ಬ ಹುಡುಗ ಎದ್ದು ನಿಂತು ಹೇಳಿದ :"ಸಾರ್, 'ಮಧ್ಯದಲ್ಲಿ ಕೂತಿರುವವರು ನಮ್ಮ ಉಪಾಧ್ಯಾಯರು. ಇವರು ಈಗ ತೀರಿಕೊಂಡಿರುವರು' ಎಂಬುದನ್ನೂ ಹೇಳಬಹುದಲ್ಲ?"